# ಸಾರಾ ಕಾರ್ತಿಕ್‌ಗೆ ಸಮಯವಿಲ್ಲ





ಸಾರಾ ಅಲಿ ಖಾನ್ ಮತ್ತು ಕಾರ್ತಿಕ್ ಆರ್ಯನ್ ನಡುವಣ ಸಲ್ಲಾಪ ಗುಟ್ಟಿನ ಸಂಗತಿಯೇನಲ್ಲ. ಪರಸ್ಪರ ತೆಕ್ಕೆ ಬಿದ್ದು ಓಡಾಡುವ ಈ ಜೋಡಿ, ಬಾಲಿವುಡ್‌ನ ಹೊಸಕಾಲದ ಪ್ರೇಮಿಗಳಲ್ಲೇ ಹೆಚ್ಚು ಸುದ್ದಿಯಲ್ಲಿದೆ. ಆದರೆ ಇತ್ತೀಚೆಗೆ ಈ ಜೋಡಿ ಪರಸ್ಪರ ಬೇರ್ಪಟ್ಟಿದೆ ಎಂಬ ಗುಸುಗುಸು ಕೂಡಾ ಕೇಳಿಬರುತ್ತಿದೆ. ‘ಆಜ್ ಕಲ್’ ಸಿನಿಮಾದಲ್ಲಿ ಜೊತೆಯಾಗಿ ನಟಿಸುತ್ತಿದ್ದ ವೇಳೆಯಲ್ಲೇ ಕಾಫಿ ವಿದ್ ಕರಣ್ ಷೋನಲ್ಲಿ ಈ ಜೋಡಿಯ ಡೇಟಿಂಗ್ ಸುದ್ದಿಯೂ ಹೊರಬಿದ್ದಿತ್ತು. ಆದರೆ ಆ ಚಿತ್ರದ ಶೂಟಿಂಗ್ ಮುಗಿದ ಬಳಿಕ ಜೋಡಿ ದೂರವಾಗಿದೆ ಎನ್ನುವ ಸುದ್ದಿ ಹಬ್ಬಿದೆ.

ಕಾರ್ತಿಕ್ ಆರ್ಯನ್‌ಗೆ ಕೈತುಂಬ ಕೆಲಸವಿದೆ. ‘ಪತಿ ಪತ್ನಿ ಔರ್ ವೊ’ ಚಿತ್ರೀಕರಣ ಮುಗಿಸಿದ ಬಳಿಕ ಕಾರ್ತಿಕ್ ‘ಭೂಲ್ ಭುಲೈಯ 2’ ಶೂಟಿಂಗ್‌ನಲ್ಲಿ ಬ್ಯುಸಿ ಆಗಿದ್ದಾನೆ. ಮುಂದಿನ ತಿಂಗಳು ‘ದೋಸ್ತಾನಾ 2’ ಶೂಟಿಂಗ್ ಬೇರೆ ಶುರುವಾಗಲಿದೆ. ಸಾರಾ ಅಲಿ ಖಾನ್ ಇನ್ನೊಂದೆಡೆ ‘ಕೂಲಿ ನಂಬರ್ 1’ನ ಶೂಟಿಂಗ್‌ನಲ್ಲಿ ಬ್ಯುಸಿಯಾಗಿದ್ದಾಳೆ.

ಇಬ್ಬರೂ ಕೆಲಸದ ಒತ್ತಡದಲ್ಲಿರುವುದರಿಂದ ಹೆಚ್ಚಾಗಿ ಭೇಟಿಯಾಗಲು ಆಗುತ್ತಿಲ್ಲ ಎನ್ನುವುದು ಜೋಡಿಯ ಆಪ್ತರ ಹೇಳಿಕೆ. ತನ್ನ ಚಿತ್ರದ ಶೂಟಿಂಗ್ ಮುಗಿದ ತಕ್ಷಣ ಲಕ್ನೋದಲ್ಲಿ ‘ಪತಿ...’ ಚಿತ್ರದ ಶೂಟಿಂಗ್‌ನಲ್ಲಿದ್ದ ಕಾರ್ತಿಕ್‌ನನ್ನು ಭೇಟಿಯಾಗಲು ಸಾರಾ ಧಾವಿಸಿದ್ದಳಂತೆ. ಸಾರಾ ಬರ್ತ್‌ಡೇ ಸಂಭ್ರಮದಲ್ಲಿ ಹಾಜರಾಗಲು ಕಾರ್ತಿಕ್ ಪುರುಸೊತ್ತು ಮಾಡಿಕೊಂಡು ಬ್ಯಾಂಕಾಕ್‌ಗೆ ಹೋಗಿದ್ದನಂತೆ. ಈ ಮಧ್ಯೆ ಮುಂಬೈಯಲ್ಲಿ ಇರುವಾಗಲೆಲ್ಲ ಈ ಜೋಡಿ ರೆಸ್ಟೋರೆಂಟ್‌ಗಳಲ್ಲಿ ಕಾಣಿಸಿಕೊಳ್ಳುತ್ತಿದೆ. ಬ್ರೇಕಪ್ ಆಗಿಲ್ಲ.. ಎನ್ನುವುದು ಆಪ್ತರ ಹೇಳಿಕೆ.

ಅಂದ ಹಾಗೆ, ಮಗಳ ಈ ಜೋಡಿ ಜೀವದ ಬಗ್ಗೆ ಸೈಫ್ ಅಲಿ ಖಾನ್‌ನನ್ನು ಪತ್ರಕರ್ತರು ಪ್ರಶ್ನಿಸಿದರಂತೆ. ‘ಅವಳು ಮೆಚ್ಚಿಕೊಂಡಿದ್ದಾಳೆಂದರೆ ಅವನು ಚೆನ್ನಾಗಿಯೇ ಇರಬೇಕು’ ಎಂದು ಸೈಫ್ ನಕ್ಕುಬಿಟ್ಟನಂತೆ. ■

# ಛಾಯಾಗ್ರಾಹಕರ ಕಾಟ

ಸಿನಿಮಾ ತಾರೆಯರ ಮಕ್ಕಳಿಗೆ ಛಾಯಾಗ್ರಾಹಕರ ಕಾಟ ಇತ್ತೀಚೆಗೆ ಅತಿಯಾಗಿದೆಯೆ? ಹೌದು ಎನ್ನುತ್ತಿದ್ದಾರೆ ಬಾಲಿವುಡ್ ತಾರೆಯರು. ‘ನನ್ನ ಮಗ ಅಬ್ರಾಮ್ ಈ ಛಾಯಾಗ್ರಾಹಕರ ಕಾಟ ತಡೆಯಲಾಗದೆ ಹೊರಗಡೆ ಎಲ್ಲೂ ಓಡಾಡುವುದಿಲ್ಲ. ಹೆಚ್ಚು ಸಮಯ ಸ್ಟುಡಿಯೊದಲ್ಲೇ ಉಳಿಯುತ್ತಾನೆ’ ಎನ್ನುವುದು ಶಾರೂಕ್ ಪತ್ನಿ ಗೌರಿ ಖಾನ್ ಅಂಬೋಣ. ಅದು ನಿಜವೇ ಎನ್ನುವಂತೆ, ಅಬ್ರಾಮ್ ಹೊರಗೆ ಕಾಣಿಸಿಕೊಳ್ಳುವುದೂ ಕಡಿಮೆಯೇ. ಇದೀಗ ಕರೀನಾ ಕಪೂರ್ ಕೂಡಾ, ‘ನನ್ನ ಮಗ ತೈಮೂರ್ ಫೋಟೊ ತೆಗೆಯುವುದನ್ನು ಮೆಚ್ಚುವುದಿಲ್ಲ’ ಎಂದಿದ್ದಾಳೆ. ಇತ್ತೀಚೆಗೆ ಅಮ್ಮ–ಮಗ ಒಟ್ಟಿಗೆ ಹೋಗುತ್ತಿದ್ದಾಗ ಫೋಟೊ ತೆಗೆಯಲು ಛಾಯಾಗ್ರಾಹಕರು ಮುತ್ತಿದರಂತೆ. ಮಗ ತಕ್ಷಣ ‘ನೋ ಅಮ್ಮಾ, ನೋ ಫೋಟೊ’ ಎಂದು ಕೂಗಿದನಂತೆ. ಅದೇನೇ ಇದ್ದರೂ, ತಾರಾಮಕ್ಕಳ ಪೈಕಿ ಪ್ರತಿವಾರವೂ ಹೊಸ ಹೊಸ ಫೋಟೊಗಳು ಹೆಚ್ಚು ಬರುತ್ತಿರುವುದು ತೈಮೂರನದ್ದೇ ಎನ್ನುವುದರಲ್ಲಿ ಎರಡು ಮಾತಿಲ್ಲ.

ಐಶ್ವರ್ಯ ರೈ ಮಗಳು ಆರಾಧ್ಯಾ ಕೂಡಾ ಛಾಯಾಗ್ರಾಹಕರ ಕಣ್ಣು ತಪ್ಪಿಸಿಕೊಂಡೇ ಓಡಾಡುತ್ತಾಳೆ. ಅದರಲ್ಲೂ ಆಕೆಯ ಅಮ್ಮ ಆಕೆಗೆ ‘ಬಾಡಿಗಾರ್ಡ್’ ಇದ್ದ ಹಾಗೆ. ‘ನಮ್ಮದು ಸದಾ ಸ್ಪಾಟ್‌ಲೈಟ್ ಮುಂದೆ ಇರುವ ಜೀವನ. ಇದು ನಮ್ಮ ಆಯ್ಕೆ, ಬೇರೆ ದಾರಿಯಿಲ್ಲ. ಆದರೆ ಮಕ್ಕಳಿಗೆ ಇದೆಲ್ಲ ಅಷ್ಟು ಹಿಡಿಸುವುದಿಲ್ಲ. ನನ್ನ ಮಗಳನ್ನು ಛಾಯಾಗ್ರಾಹಕರ ಒತ್ತಡ ಕಾಡದಂತೆ ನಾನು ಸದಾ ನೋಡಿಕೊಳ್ಳುತ್ತೇನೆ. ಕೆಲವು ಸಲ ಛಾಯಾಗ್ರಾಹಕರು ಮುತ್ತಿದಾಗ, ಆರಾಧ್ಯಾ ಸಹಜವಾಗಿ ಇರುವಂತೆ ನೋಡಿಕೊಳ್ಳಲು ಆಕೆಯ ಜೊತೆಗೆ ನಾನು ಮಾತನಾಡುತ್ತಾ ಹೆಜ್ಜೆ ಹಾಕುತ್ತೇನೆ’ ಎಂದಿದ್ದಾಳೆ ಐಶ್ವರ್ಯ.

■ ಬಿಂದು



